**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಬೆಂಗಳೂರು**
**ಇವರ ಕಚೇರಿ ಆದೇಶದ ಉದ್ದರಣ**

ಕಚೇರಿ ಆದೇಶ ಸಂಖ್ಯೆ: 10 /2014-15 ದಿನಾಂಕ: 8 -5-2015

ವಿಷಯ: 62 ವಲಯ ಅರಣ್ಯಾಧಿಕಾರಿ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಕುರಿತು.

ಉಲ್ಲೇಖ:
1) ಈ ಕಚೇರಿಯ ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-1/2012-13 ದಿನಾಂಕ 12-09-2012.
2) ಈ ಕಚೇರಿಯ ಪ್ರಕಟಣೆ ಸಂಖ್ಯೆ: ಬಿ9-ವಅ-ವಿವ-1/2012-13 ದಿನಾಂಕ 14-8-2014.
3) ಈ ಕಚೇರಿಯ ಪ್ರಕಟಣೆ ಸಂಖ್ಯೆ: ಬಿ9-ವಅಅ-ವಿವ-1/2012-13 ದಿನಾಂಕ 01-09-2014.
4) ಸರ್ಕಾರದ ಪತ್ರ ಸಂಖ್ಯೆ: ಅಪಜೀ 157 ಅಅಸೇ 2014 ದಿನಾಂಕ 14-10-2014.
5) ಈ ಕಚೇರಿಯ ಆದೇಶ ಸಂಖ್ಯೆ: 107/2014-15 ದಿನಾಂಕ 24-02-2015.
6) ಶ್ರೀ ಮಣಿಕಾಂತ ವೈದ್ಯ, ನೊಂದಣಿ ಸಂಖ್ಯೆ: 12502 ಇವರ ಮನವಿ ದಿನಾಂಕ 26-2-2015.

-0-

ಉಲ್ಲೇಖ (1) ರಲ್ಲಿ 62 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಉಲ್ಲೇಖ (2)ರ ಈ ಕಚೇರಿಯ ಪ್ರಕಟಣೆಯಲ್ಲಿ 1:2 (ಹುದ್ದೆ:ಅಭ್ಯರ್ಥಿ)ಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಈ ಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆ, ವೈದ್ಯಕೀಯ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆಗಳನ್ನು ಏರ್ಪಡಿಸಲಾಗಿರುತ್ತದೆ. ಉಲ್ಲೇಖ (3) ರಲ್ಲಿ 1:2 (ಹುದ್ದೆ:ಅಭ್ಯರ್ಥಿ) ಗಳಿಗೆ ನಡೆಸಲಾದ ಮೂಲ ದಾಖಲೆಗಳ ಪರಿಶೀಲನೆ, ವೈದ್ಯಕೀಯ ಪರೀಕ್ಷೆ ಮತ್ತು ದೈಹಿಕ ತಾಳ್ವಿಕೆ (ಕಾಲ್ನಡಿಗೆ ಪರೀಕ್ಷೆ) ಯ ಫಲಿತಾಂಶವನ್ನು ಪ್ರಕಟಿಸಲಾಗಿದೆ. 61 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಹಾಗೂ ಕಾಯುವಿಕೆ ಪಟ್ಟಿಯನ್ನು ಸಹ ಪ್ರಕಟಿಸಲಾಗಿರುತ್ತದೆ.

ನೋಟಿಫೈ ಮಾಡಿರುವ 62 ಹುದ್ದೆಗಳ ಪೈಕಿ 61 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಭರ್ತಿ ಮಾಡಬೇಕಾದ ಒಂದು ಹುದ್ದೆಯಾದ ಬಿ.ಎಸ್‌ಸಿ. (ಅರಣ್ಯ ಶಾಸ್ತ್ರ) ಪದವೀಧರರಿಗೆ ಲಭ್ಯವಾಗುವ ಹುದ್ದೆಗಳ ಮೀಸಲಾತಿ ವರ್ಗೀಕರಣದಲ್ಲಿ ಪ್ರವರ್ಗ-1 (ಗ್ರಾಮೀಣ) ಮೀಸಲಾತಿಯ ಒಂದು ಹುದ್ದೆ ಲಭ್ಯವಿದ್ದು, ಈ ಪ್ರವರ್ಗದಡಿ ಯಾವ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದುದರಿಂದ ಇದನ್ನು ಯಾವ ರೀತಿ ಭರ್ತಿ ಮಾಡಬೇಕೆಂಬ ಸ್ಪಷ್ಟೀಕರಣವನ್ನು ಸರ್ಕಾರದಿಂದ ಕೋರಲಾಗಿತ್ತು. ಈ ಬಗ್ಗೆ ಸರ್ಕಾರವು ಉಲ್ಲೇಖ (4)ರ ಪತ್ರದಲ್ಲಿ ಪ್ರವರ್ಗ-1 (ಗ್ರಾಮೀಣ) ಅಭ್ಯರ್ಥಿಯು ಲಭ್ಯವಿಲ್ಲದ ಸ್ಥಾನದಲ್ಲಿ ಪ್ರವರ್ಗ-1 (ಸಾಮಾನ್ಯ) ಅಭ್ಯರ್ಥಿಯಿಂದ ಭರ್ತಿ ಮಾಡಬಹುದಾಗಿ ಸರ್ಕಾರವು ನಿರ್ದೇಶನ ನೀಡಿರುತ್ತದೆ.

ಈಗಾಗಲೇ ದಿನಾಂಕ 01-09-2014 ರಂದು ಪ್ರಕಟಿಸಿರುವ ಕಾಯುವಿಕೆ ಪಟ್ಟಿಯಲ್ಲಿ ಲಭ್ಯವಿದ್ದ ಪ್ರವರ್ಗ-1 (ಸಾಮಾನ್ಯ) ಅಭ್ಯರ್ಥಿಯಾದ ಶ್ರೀ ಮಣಿಕಾಂತ ವೈದ್ಯ, ನೊಂದಣಿ ಸಂಖ್ಯೆ: 12502 ಇವರನ್ನು ಪ್ರವರ್ಗ-1 (ಗ್ರಾಮೀಣ) (ಲೀನ್) ಪ್ರವರ್ಗದಡಿ ಆಯ್ಕೆ ಮಾಡಿ ಉಲ್ಲೇಖ (5) ರಲ್ಲಿ ಆದೇಶ ಹೊರಡಿಸಲಾಗಿತ್ತು. ಸದರಿ ಅಭ್ಯರ್ಥಿಯು ಉಲ್ಲೇಖ (6)ರ ತಮ್ಮ ಮನವಿಯಲ್ಲಿ ವೈಯಕ್ತಿಕ ಕಾರಣಗಳಿಂದ ಹುದ್ದೆ ಬೇಡವೆಂದು ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿರುತ್ತಾರೆ. ಪ್ರಸ್ತುತ ಈ ಹುದ್ದೆ ಖಾಲಿ ಇರುತ್ತದೆ.